**ದಿನಾಂಕ 29-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದಃ**

ನನ್ನ ಬಳಿ ವಾಹನ ಚಲಾಯಿಸಲು ಡ್ರೈವಿಂಗ್ ಲೈಸೆನ್ಸ್ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ . ಅಪಘಾತದ ಸಮಯದಲ್ಲಿ ನನಗೆ ಲೈಸೆನ್ಸ್ ಇಲ್ಲದೇ ಇದ್ದುದರಿಂದ ವಾಹನವನ್ನು ಆ ಸಮಯದಲ್ಲಿ ನಾನೇ ಚಲಾಯಿಸುತಿದ್ದುದರಿಂದ ಪರಿಹಾರಕ್ಕೆ ತೊಂದರೆ ಆಗುತ್ತದೆ ಎಂದು ಬೇರೆಯವನು ವಾಹನ ಚಲಾಯಿಸುತಿದ್ದ ಎಂದು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ .

ನನಗೆ ವೈದ್ಯರು ಲಿಖಿತವಾಗಿ ವಿಶ್ರಾಂತಿ ಪಡೆಯಬೇಕು ಎಂದು ಸೂಚಿಸಿರುತ್ತಾರೆ . ಸದ್ರಿ ವೈದ್ಯರು ಕೊಟ್ಟ ಲಿಖಿತ ಸರ್ಟಿಫಿಕೇಟ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ . ನಾನು ಹೇಳುವಂತೆ ನಾನು ಯಾವುದೇ ಬೆಡ್ ರೆಸ್ಟ್‌ನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಆಗಾಗ್ಗೆ ಪೊಲೀಸರನ್ನು ಸಂಪರ್ಕಿಸುತಿದ್ದೆ ಎನ್ನುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ ಆಗಾಗ್ಗೆ ಪೊಲೀಸರನ್ನು ಸಂಪರ್ಕಿಸುತಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ . ಪೊಲೀಸರು ನನಗೆ ದೋಷಾರೋಪಣಾ ಪತ್ರ ದ ಮತ್ತು ಇತರೇ ದಾಖಲಾತಿಗಳನ್ನು ಕೊಡಲಿಲ್ಲ ಮತ್ತು ತಡ ಮಾಡಿದರು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ . ನಾನು ಹಾಕಿರುವ ಅರ್ಜಿ ಕಾಲಬಾದಿತದಿಂದ ಕೂಡಿದೆ ಎಂದರೆ ಸರಿಯಲ್ಲ .

ನನಗೆ ಆದ ಗಾಯಗಳು ಸಂಪೂರ್ಣವಾಗಿ ವಾಸಿ ಆಗಿಲ್ಲ. ಸಾಕ್ಷಿ ಮುಂದುವರಿದು ಈಗಲೂ ನೋವು ಇರುತ್ತದೆ . ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ . ಕೆ ಎಂ ಸಿ ಆಸ್ಪತ್ರೆ ಯಲ್ಲಿ ನಾನು ಮೆಡಿಕಲ್ ಬಿಲ್ಲು

ಸಂಬಂದಪಟ್ಟಂತೆ ಹಣ ಪಾವತಿಸದರೇ ಆಗ PAID ಎಂದು ಸೀಲು ಹಾಕುತ್ತಾರೆ ಎಂದರೆ ಸ ರಿ . ಅದೇ ರೀತಿ ಹೈಟೆಕ್ ಆಸ್ಪತ್ರೆ ಯಲ್ಲಿ ಕೂಡ PAID ಎಂದು ಸೀಲು ಹಾಕುತ್ತಾರೆ ಎಂದರೆ ಸರಿ . ನಾನು ಹೇಳುವಷ್ಟು ವೈದ್ಯಕೀಯ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ . ನಾನು ಹೇಳುವಂತೆ ನನಗೆ ಯಾವುದೇ ಮುಂದುವರಿದ ಚಿಕಿತ್ಸೆ ಯ ಅಗತ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಯಾವುದೇ ಪರಿಚಾರಕರನ್ನು ನಾನು ನೇಮಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುರೇಶ್ ಎನ್ನುವ ಹೆಸರಿನ ವ್ಯಕ್ತಿಯನ್ನು ಪರಿಚಾರಕನನ್ನಾಗಿ ನೇಮಿಸಿಕೊಂಡಿದ್ದೆ. ಅವರ ತಂದೆಯ ಹೆಸರು ಶೇಖರ . ಸುರೇಶ್ ರವರಿಗೆ 32 ವರ್ಷ ವಯಸ್ಸು . ಅವರು ಊರು ಕರ್ಜೆ. ಅವರು ನನ್ನ ಪರಿಚಯದವರು . ನಾನು ಹೇಳುವ ಸುರೇಶ್ ಎನ್ನುವ ಪರಿಚಾರಕರು ಇರಲಿಲ್ಲ ಮತ್ತು ಯಾವುದೇ ಹಣ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ , ನಾನು ಯಾವುದೇ ಪೌಷ್ಟಿಕ ಆಹಾರ ಪಡೆದಿಲ್ಲ ಎಂದರೆ ಸರಿಯಲ್ಲ .

ನಾನು ಶಾಮಿಯಾನ ಹಾಕುವ ಮತ್ತು ಕಟ್ಟುವ ಕೆಲಸ ಮಾಡುತ್ತೇನೆ . ನಾನು ರವಿರಾಜ್ ಭಟ್ ಎನ್ನುವರ ಬಳಿ ಶಾಮಿಯಾನ ಹಾಕುವ ಮತ್ತು ಕಟ್ಟುವ ಕೆಲಸ ಮಾಡುತ್ತೇನೆ. ನನಗೆ ಸಂಭಳವನ್ನು ರವಿರಾಜ್ ಭಟ್ ರವರೇ ಕೊಡುತಿದ್ದರು . ಸಂಭಳ ಕೊಟ್ಟ ಬಗ್ಗೆ ನನ್ನಿಂದ ಸಹಿ ಪಡೆಯುತ್ತಿರಲಿಲ್ಲ . ನಾನು ಆದಾಯ ತೆರಿಗೆ ಇಲಾಖೆಗೆ ರಿಟರ್ನ್ಸ್ ನ್ನು ಸಲ್ಲಿಸುವುದಿಲ್ಲ . ಕಾರಣ ನನಗೆ ತಿಂಗಳಿಗೆ ರೂ 30,000/- ಸಂಭಳ ಇರುತ್ತದೆ . ನನಗೆ ತಿಂಗಳಿಗೆ ರೂ 30,000/- ಸಂಭಳ ಇರುವ ಬಗ್ಗೆ ದಾಖಲೆ ಇಲ್ಲ . ಶಾಮಿಯಾನ ಹಾಕುವ ಮತ್ತು ಕಟ್ಟುವ ಕೆಲಸ ಪ್ರತಿದಿನ ಇರುವುದಿಲ್ಲ ಎಂದರೆ ಸರಿಯಲ್ಲ . ಶಾಮಿಯಾನವನ್ನು ಸಭೆ ಸಮಾರಂಭ ಗಳು ಇರುವಾಗ ಹಾಕುತ್ತೇವೆ ಎಂದರೆ ಸರಿ . ನಾನು ಹೇಳುವ ಕೆಲಸವನ್ನು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ . ನಾನು ಹೇಳುವಷ್ಟು ಸಂಭಳ ಬರುತಿರಲಿಲ್ಲ ಎಂದರೆ ಸರಿಯಲ್ಲ . ನನ್ನ ಮುಖ್ಯವಿಚಾರಣೆಯ ಪ್ಯಾರಾ ನಂ 9 ಮತ್ತು 10 ರಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ .

ನನಗೆ ಯಾವುದೇ ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ . ನಾನು ಹೇಳುವಷ್ಟು ಅಂಗನ್ಯೂನತೆ ಇಲ್ಲ ಎಂದರೆ ಸರಿಯಲ್ಲ . ನಾನು ಹೇಳುವಂತೆ ಕೆಎ 20 ಇಟಿ 5074 ವಾಹನದ

ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ . ಕೆಎ 02 ಎಂಸಿ 6501 ವಾಹನ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.